**ಶ್ರೀ ಸುತ್ತೂರು ಮಠ, ಮೈಸೂರು ಶಾಖೆ**

**ಚಾಮುಂಡಿಬೆಟ್ಟದ ತಪ್ಪಲು, ಮೈಸೂರು**

# ಬೆಳದಿಂಗಳ ಸಂಗೀತ 221

**9 ಫೆಬ್ರವರಿ 2020 * ಭಾನುವಾರ * ಸಂಜೆ 6.00**

**ದಿವ್ಯ ಸಾನ್ನಿಧ್ಯ**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

**ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ**



**ಗಾಯನ**

**ವಿದ್ವಾನ್ ಎನ್. ಶ್ರೀನಾಥ್**



**ವಯೊಲಿನ್**

**ವಿದ್ವಾನ್ ಮೈಸೂರು ಎಂ. ಕೇಶವ**



**ಮೃದಂಗ**

**ವಿದ್ವಾನ್ ಜಿ.ಎಸ್. ರಾಮಾನುಜಂ**

## ಬೆಳದಿಂಗಳ ಸಂಗೀತ 222

**9 ಮಾರ್ಚ್ 2020**

**ಗಾಯನ**

**ವಿದುಷಿ ಕಲಾವತಿ ಅವಧೂತ್**

**ವಯೊಲಿನ್**

**ಮಾಸ್ಟರ್ ಸುಮಂತ್ ಮಂಜುನಾಥ್**

**ಮೃದಂಗ**

**ವಿದ್ವಾನ್ ತುಮಕೂರು ಬಿ. ರವಿಶಂಕರ್**

**ವಿದ್ವಾನ್ ಮೈಸೂರು ಎನ್. ಶ್ರೀನಾಥ್‌ರವರು** ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದ ಪ್ರತಿಭಾವಂತರಲ್ಲೊಬ್ಬರು. ಪ್ರಾರಂಭಿಕ ಸಂಗೀತ ಶಿಕ್ಷಣವನ್ನು ವಿದುಷಿ ಕೆ.ಜಿ. ಕನಕಲಕ್ಷ್ಮಿಯವರ ಬಳಿ ಪಡೆದರು. ಬಳಿಕ ಡಾ. ಎಸ್. ರಾಮನಾಥನ್, ವಿದ್ವಾನ್ ಆರ್.ಕೆ. ನಾರಾಯಣಸ್ವಾಮಿ ಮತ್ತು ವಿದ್ವಾನ್ ಆರ್.ಎನ್. ತ್ಯಾಗರಾಜನ್‌ರವರ ಬಳಿ ಉನ್ನತ ಶಿಕಣ ಪಡೆದರು. ಡಾ. ಆರ್.ಎನ್. ತಾರಾನಾಥನ್‌ರವರ ಬಳಿ ಸಂಗೀತದ ನವಿರು, ಸೂಕ್ಷ್ಮತೆಗಳನ್ನು ಕಲಿತರು. ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಬಿ. ಮ್ಯೂಸಿಕ್, ಕರ್ನಾಟಕ ಸಂಗೀತದಲ್ಲಿ ವಿದ್ವತ್, ಸಂಸ್ಕೃತ ಆಗಮದಲ್ಲಿ ಪ್ರವೀಣ ಪದವಿ ಪಡೆದಿದ್ದಾರೆ. ಮೈಸೂರು ಆಕಾಶವಾಣಿಯ ಬಿ–ಹೈ ಶ್ರೇಣಿಯ ಕಲಾವಿದರು. ಇವರು ಧರ್ಮಸ್ಥಳ ಮಂಜುನಾಥಸ್ವಾಮಿ ವಿದ್ಯಾರ್ಥಿವೇತನ, ಹೊಂಬುಜ ಜೈನ ಮಠದ ವಿದ್ಯಾರ್ಥಿವೇತನ ಮತ್ತು ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿ ವಿದ್ಯಾರ್ಥಿವೇತನ ಪಡೆದಿದ್ದಾರೆ. ದೇಶವಿದೇಶಗಳಲ್ಲಿ ಸಂಗೀತ ಕಚೇರಿಗಳನ್ನು ನೀಡಿ ಪಂಡಿತ–ಪಾಮರರನ್ನು ರಂಜಿಸಿದ್ದಾರೆ. ಕಂಚಿ ಕಾಮಕೋಟಿ ಪೀಠದ 'ಆಸ್ಥಾನ ವಿದ್ವಾನ್' ಪುರಸ್ಕಾರ, ರೋಟರಿ ಸಂಸ್ಥೆಯ "ರೋಟರಿ ರಂಗ" ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಶಾಸ್ತ್ರಶುದ್ಧಿ, ಮನೋಧರ್ಮಗಳ ಹಿತಮಿತವಾದ ಸಂಗಮ ಇವರ ಸಂಗೀತದ ವೈಶಿಷ್ಟ್ಯ.

**ವಿದ್ವಾನ್ ಮೈಸೂರು ಎಂ. ಕೇಶವರವರು** ತಾಯಿ ಶ್ರೀಮತಿ ಅನೂರಾಧ ಮೋಹನ್‌ರವರಿಂದ ಹಾಡುಗಾರಿಕೆ ಮತ್ತು ವಯೊಲಿನ್ ವಾದದ ಮೊದಲ ಪಾಠಗಳನ್ನು ಕಲಿತರು. ಇವರು ವಿದ್ವಾನ್ ಪರೂರು ಎಂ.ಎಸ್. ಗೋಪಾಲಕೃಷ್ಣನ್ ಬಾನಿಯಲ್ಲಿ ವಯೊಲಿನ್ ನುಡಿಸುತ್ತಾರೆ.

**ವಿದ್ವಾನ್ ಜಿ.ಎಸ್. ರಾಮಾನುಜಂರವರು** ಸಂಗೀತಗಾರರ ಮನೆತನದಿಂದ ಬಂದವರು. ಗಾನಕಲಾಭೂಷಣ ವಿದ್ವಾನ್ ಪಿ.ಜಿ. ಲಕ್ಷ್ಮೀನಾರಾಯಣರವರ ಶಿಷ್ಯರು. ದೇಶ ವಿದೇಶಗಳಲ್ಲಿ ಹಲವಾರು ಖ್ಯಾತ ಸಂಗೀತಗಾರರಿಗೆ ಮೃದಂಗ ಸಹಕಾರ ನೀಡಿದ್ದಾರೆ. ಸುಸ್ವರಾಲಯ ಸಂಗೀತ ಕಾಲೇಜು ಇತ್ತೀಚೆಗೆ ನೀಡಿರುವ "ಸ್ವರಲಯ ಶೃಂಗ" ಪುರಸ್ಕಾರವೂ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ.

ಫೋನ್: 0821–2548220, 2548221 * ಫ್ಯಾಕ್ಸ್: 0821–2548219 * ಇಮೇಲ್: jssashram@yahoo.com